International Journal of Kannada Research 2023; 9(3): 34-37

International Journal of Kannada Research
www.kannadajournal.com

**ISSN: 2454–5813**
IJKR 2023; 9(3): 34-37
© 2023 IJKR
www.kannadajournal.com
Received: 19-06-2023
Accepted: 22-07-2023

**Dr. Mohan A**
Assistant Professor of Kannada
Govt First Grede College,
Hosadurga, Chitradurga,
Karnataka, India

**Corresponding Author:**
**Dr. Mohan A**
Assistant Professor of Kannada
Govt First Grede College,
Hosadurga, Chitradurga,
Karnataka, India

# ರಾಷ್ಟ್ರೀಯತೆಯ ಪರಿಕಲ್ಪನೆ

## Dr. Mohan A

**ಪೀಠಿಕೆ**

ಮೊಗಲ್ ಸಾಮ್ರಾಜ್ಯವು ಹದಿನೆಂಟನೆಯ ಶತಮಾನದಲ್ಲಿ ಅವನತಿಗೊಂಡು ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡಿತು. ಭಾರತೀಯ ರಾಜ್ಯಗಳಿಗೂ ಮತ್ತು (ಯೂರೋಪಿನ) ಐರೋಪ್ಯ ವಾಣಿಜ್ಯ ಕಂಪೆನಿಗಳಿಗೂ ನಡುವಿನ ಶಕ್ತಿ–ಸಂಬಂಧಗಳು ಯೂರೋಪಿಯನ್ನರಿಗೆ ಅನುಕೂಲವಾಗುವಂತೆ ಸತತ ಬದಲಾಗುತ್ತಿತ್ತು. ಭಾರತಕ್ಕೆ ಯೂರೋಪಿಯನ್ನರು ಆಗಮಿಸಿದುದು ಭಾರತೀಯ ಇತಿಹಾಸದಲ್ಲೇ ಮಹತ್ವರ ಘಟನೆ, ಹದಿನೆಂಟನೆಯ ಶತಮಾನದ ವೇಳೆಗೆ ಪ್ರೆಂಚರು, ಬ್ರಿಟಿಷರು ಭಾರತೀಯ ರಾಜ್ಯಗಳನ್ನು ತಮ್ಮ ವಶಮಾಡಿಕೊಳ್ಳಲುತೊಡಗಿದರು. ಇಲ್ಲಿನ ಮೊಗಲ್ ಸಾಮ್ರಾಜ್ಯಾದಿಯಾಗಿ ಎಲ್ಲಾ ಕಡೆಯು ಅವರು ವಾಣಿಜ್ಯ ಸೌಲಭ್ಯಗಳೆಲ್ಲವನ್ನು ಪಡೆದು ಬಲವಾಗಿ ನೆಲೆಯೂರಿದರು. ಈ ಪ್ರಬಲವಾದ ನೆಲೆವೂರಿಕೆಯಲ್ಲಿ ಫ್ರೆಂಚರು, ಡಚ್ಚರು, ಬ್ರಿಟಿಷರು ತಮ್ಮೊಳಗೆ ಸ್ಪರ್ಧಿಸಬೇಕಾಯಿತು. ಇದು ಮುಖ್ಯವಾಗಿ ವ್ಯಾಪಾರಿ ಸ್ಪರ್ಧೆಯಾಗಿತ್ತು.

ಇದಕ್ಕೆ ಪೂರ್ವದಲ್ಲೇ ಕ್ರಿ.ಶ.೧೯೦೦ ರಲ್ಲಿ ರಾಣಿ ಎಲಿಜಬೆತ್ತಳು ಭಾರತ ಮತ್ತು ಪೌರ್ವಾತ್ಯ ರಾಜ್ಯಗಳೊಡನೆ ವ್ಯಾಪಾರ ನಡೆಸಲು ಕಂಪೆನಿಯೊಂದಕ್ಕೆ ಅನುಮತಿ ನೀಡಿದ್ದಳು. ಈ ಮುಖೇನ ಭಾರತಕ್ಕೆ ಈಸ್ಟ್ ಇಂಡಿಯ ಕಂಪೆನಿಯೆಂಬ ವ್ಯಾಪಾರ ಸಂಸ್ಥೆ ಆಡಳಿತಕ್ಕೆ ಬರುವುದರೊಂದಿಗೆ 'ಭಾರತವು ಬ್ರಿಟಿಷರ ವಸಾಹತು' ಆಗಿ ಬದಲಾಗುವ ಹೆಜ್ಜೆಗಳು ಮೂಡಲಾರಂಭಿಸಿತು. ಈ ಸಂಸ್ಥೆ ಭಾರತದ ಆಡಳಿತದಲ್ಲಿ ಎಂತಹ ಮಹತ್ತರ ಅಧಿಕಾರ ಪಡೆಯಿತ್ತೆಂದರೆ ೧೬೬೧ರಲ್ಲೇ 'ಯುದ್ಧ ಘೋಷಿಸುವ ಮತ್ತು ಶಾಂತಿ ಒಪ್ಪಂದ' ಮಾಡುವ ಹಕ್ಕು ನೀಡಿತ್ತು. ೧೬೮೬ರ ವೇಳೆಗೆ ತನ್ನದೇ ನಾಣ್ಯ ಮತ್ತು ಸೇನೆ ಸ್ಥಾಪಿಸುವ ಹಕ್ಕನ್ನು ಈ ಕಂಪೆನಿ ಪಡೆಯುವುದರೊಂದಿಗೆ ಭಾರತದಲ್ಲಿ ಈ ಕಂಪೆನಿಯ ಚಟುವಟಿಕೆಗಳು ಕ್ಷಿಪ್ರಗತಿಯಲ್ಲಿ ಬೆಳೆಯಿತು. ಕ್ರಮೇಣ ಬ್ರಿಟಿಷರ ವಸಾಹತು ಆಗಿ ಬದಲಾದ ಭಾರತ ವಸಾಹತುಶಾಹಿ ಆಡಳಿತೆಗೆ ಒಳಗಾಯಿತು. ಈ ಕಂಪೆನಿ ಆಡಳಿತ ಮುಖೇನ ಬ್ರಿಟಿಷರು ಭಾರತದಲ್ಲಿ ನಡೆಸಿದ ಆಡಳಿತದ ಭಾರತೀಯ ಅನುಭವವು ವಸಾಹತುಶಾಹಿ ಅನುಭವವಾಯಿತು.

ದಕ್ಷಿಣ ಭಾರತದಲ್ಲಿ ಬ್ರಿಟಿಷರ ಅಧಿಕಾರ ಸ್ಥಾಪನೆ ಹಾಗೂ ಆಡಳಿತಕ್ಕೆ ಮೈಸೂರು ಸಂಸ್ಥಾನ ತೀವ್ರವಾದ ವಿರೋಧ ತೋರಿದರೂ ೧೭೯೯ರಲ್ಲಿ ಮೈಸೂರನ್ನು ಬ್ರಿಟಿಷರು ಗೆದ್ದುಕೊಂಡರು. ಭಾರತವನ್ನು ಬ್ರಿಟಿಷರು ವಶಪಡಿಸಿಕೊಂಡಿದ್ದರ ಪರಿಣಾಮಗಳು ಕೇವಲ ರಾಜಕೀಯ ವಲಯಕ್ಕಷ್ಟೆ ಸೀಮಿತವಾಗಿರಲಿಲ್ಲ. ಆರ್ಥಿಕ ಮತ್ತು ಜೀವನದ ಎಲ್ಲಾ ರಂಗಗಳಿಗೂ ವ್ಯಾಪಿಸಿತ್ತು. ಬ್ರಿಟಿಷರ ನಾನಾ ಬಗೆಯ ಶೋಷಣೆಗಳ ಪರಿಣಾಮವಾಗಿ ದೇಶದ ರಾಜಕೀಯ ಮತ್ತು ಸಾಮಾಜಿಕ ಇತಿಹಾಸದಲ್ಲೇ ಹೊಸ ಎಚ್ಚರದ ಅಲೆಗಳು ಹುಟ್ಟಿಕೊಂಡವು. ಭಾರತೀಯ ಜನರು ವಸಾಹತುಶಾಹಿ ನೊಗದಿಂದ ತಮ್ಮನ್ನು ಮುಕ್ತಗೊಳಿಸಲು ಸಂಪೂರ್ಣ ಹೋರಾಟ ನಡೆಸಬೇಕಾದ ಸ್ಥಿತಿಯೊಂದು ರಾಜಕೀಯ ಅನಿರ್ವಾಯವಾಗಿ ಅಂತರ್ಗತವಾಗಿ ರೂಪುಗೊಳ್ಳತೊಡಗಿತು. ಪಾಶ್ಚಿಮಾತ್ಯರ ರೀತಿ ನೀತಿಗಳು, ಆಡಳಿತ ವೈಖರಿಗಳು ಪ್ರಮುಖವಾಗಿ ಭಾರತೀಯರು ಹಿಂದೆಂದೂ ಕಂಡರಿಯದ ಬದಲಾವಣೆಯನ್ನುಂಟು ಮಾಡಿತು. ಸಾಮಾಜಿಕ, ಧಾರ್ಮಿಕ ಬದುಕು ಸ್ಥಿತ್ಯಂತರ ಪೂರ್ವ 'ನೋವು'ಗಳನ್ನು ಅನುಭವಿಸತೊಡಗಿತು. ಬೌದ್ಧಿಕ ವಲಯದಲ್ಲೂ ಪ್ರಮುಖ ಚಟುವಟಿಕೆಗಳ ರೂಪು–ರೇಷೆಗಳು ರೂಪುಗೊಂಡವು. ತಮ್ಮ ಬದುಕಿನ ಎಲ್ಲಾ ರಂಗಗಳನ್ನೂ ಭಾರತೀಯರು ಅವಲೋಕಿಸತೊಡಗಿದರು. ಭಾರತೀಯರು ನೂರಾರು ವರ್ಷಗಳಿಂದ ರೂಪಿಸಿಕೊಂಡಿದ್ದ ಜೀವನ ವಿಧಾನವನ್ನೇ ವಸಾಹತುಶಾಹಿ ಬದಲಾಯಿಸಿತು.

ವಸಾಹತುಶಾಹಿ ಅನುಭವಕ್ಕೆ ಒಳಗಾದ ಎಲ್ಲಾ ದೇಶಗಳು ಒಂದು ಬಗೆಯ ದೇಶಿವಾದದ ಚಿಂತನೆಯಲ್ಲಿ ತೊಡಗಿದವು ಮತ್ತು ವಸಾಹತುಶಾಹಿ ಧೋರಣೆಯೇ ದೇಶಿವಾದಕ್ಕೆ ಮೂಲವಾಯಿತು. ಏಕೆಂದರೆ

ವಸಾಹತುಶಾಹಿ ಸಂಸ್ಕೃತಿ ಈ ದೇಶದಲ್ಲಿನ ಬಹುಮುಖಿ ಸಂಸ್ಕೃತಿಯನ್ನು ಹತ್ತಿಕ್ಕುವ ಕೆಲಸವನ್ನು ಮಾಡಿತ್ತಷ್ಟೆ ಅಲ್ಲದೆ, ಅವುಗಳನ್ನು ನಾಶಮಾಡಿ, ಸಾಂಸ್ಕೃತಿಕ ನಿಟ್ಟಿನಲ್ಲಿ ವ್ಯಾಪಾರ ವಸಾಹತುವಿನಂತೆ ಸಾಂಸ್ಕೃತಿಕ ವಸಾಹತನ್ನಾಗಿಸಿತು. ಇಲ್ಲಿ ಬ್ರಿಟಿಷ್ ಸಂಸ್ಕೃತಿ ತನ್ನ ಯಜಮಾನಿಕೆಯನ್ನು ಮುಂದುಮಾಡಿತು. ಸಾಂಸ್ಕೃತಿಕ ವೈವಿಧ್ಯತೆ, ಬಹುಮುಖತೆಯೇ ಪ್ರಮುಖವಾದ ಭಾರತದಲ್ಲಿ ವಸಾಹತುಶಾಹಿಯನ್ನು ಬಲಗೊಳಿಸುವುದು ಬ್ರಿಟಿಷರ ಉದ್ದೇಶವಾಗಿತ್ತು. ಜತೆಗೆ ರಾಷ್ಟ್ರೀಯ ಕಲ್ಪನೆ ಭಾರತದ ನೆಲಕ್ಕೆ ಹೊಸದಾಗಿತ್ತು. ಪ್ರಾದೇಶಿಕ ಸಂಸ್ಕೃತಿಗಳ ವಿಶಿಷ್ಟತೆಯನ್ನು ನಾಶಮಾಡುವ ಅಮೂರ್ತ ಕೆಲಸಗಳನ್ನು ಬ್ರಿಟಿಷರು ಮಾಡಿದರು. ಈ ಮುಖೇನ ಭಾರತೀಯರ ಹೋರಾಟದ ಹಾದಿಯಲ್ಲಿ ಹುಟ್ಟಿಕೊಂಡ 'ರಾಷ್ಟ್ರೀಯತೆ' ರಾಜಕೀಯವಾಗಿ ಅನಿವಾರ್ಯವಾಗಿತ್ತಾದರೂ ಸಾಂಸ್ಕೃತಿಕವಾಗಿ ಅಷ್ಟೇ ಪರಕೀಯವಾಗಿತ್ತು. ಏಕೆಂದರೆ ಸ್ಥಳೀಯ ಸಂಸ್ಕೃತಿಗಳ ವಿರುದ್ಧ ಬ್ರಿಟಿಷ್ ಸಂಸ್ಕೃತಿ ಬಲವಾದ ಎದುರಾಳಿಯಾಗಿ ತಲೆ ಎತ್ತಿತು. ಈ ದಿಸೆಯಲ್ಲಿ ಪರಕೀಯ ಸಂಸ್ಕೃತಿಯೊಂದರ ಬಲವಾದ ಹೊಡೆತದಿಂದ ಪಾರಾಗಲು ಮತ್ತು ಎದುರಿಸಿ ನಿಲ್ಲಲ್ಲು ಪ್ರಾದೇಶಿಕ ಸಂಸ್ಕೃತಿಗಳು ತಮ್ಮ ಪ್ರಾದೇಶಿಕ ವಾಸ್ತವಗಳ ಬಗ್ಗೆ ತನ್ನ ನಂಬಿಕೆಗಳನ್ನು ಹೆಚ್ಚು ಹೆಚ್ಚು ಬಲಗೊಳಿಸುವುದು ಅನಿನಾರ್ಯವಾಗಿತ್ತು. ಇದರ ಪರಿಣಾಮವಾಗಿಯೇ ಅಂದರೆ ವಸಾಹತುಶಾಹಿ ಉಂಟು ಮಾಡಿದ ಸಾಂಸ್ಕೃತಿಕ ಒತ್ತಡ ಸಾಂಸ್ಕೃತಿಕ ಪುನರ್ ಜೀವನ ಪ್ರಕ್ರಿಯೆಗೆ ಕಾರಣವಾಯಿತು. ಸ್ಥಳೀಯ ಸಂಸ್ಕೃತಿ ಈ ನಿಟ್ಟಿನಲ್ಲಿ ಎಷ್ಟೇ ಬಲವಂತವಾಗಿ ಕಂಡುಬಂದರೂ ವಸಾಹತುಶಾಹಿ ತನ್ನ ಸ್ವದೃಷ್ಟಿಕೋನದ ಒತ್ತಡವನ್ನೇ ಸ್ಥಳೀಯ ಸಂಸ್ಕೃತಿಯಮೇಲೂ ಹೇರಿತು. ಅಂದರೆ ದೇಶೀಯ ಸಂಸ್ಕೃತಿಯನ್ನು ವಸಾಹತುಶಾಹಿ ಸಂಸ್ಕೃತಿಯ ಕಣ್ಣುಗಳ ಮೂಲಕ ನೋಡುವ ಕೆಲಸ ಮಾಡುತ್ತಿತ್ತು. ದೇಶೀಯ ಸಂಸ್ಕೃತಿಗಳು ತಮ್ಮ ಸಂಸ್ಕೃತಿ, ಧಾರ್ಮಿಕ ಬದುಕಿನ ಕ್ರಮಗಳು, ನ್ಯಾಯ ಬದ್ಧತೆಯನ್ನು ಕಳೆದುಕೊಂಡವು. ಬ್ರಿಟಿಷ್ ವಸಾಹತುಶಾಹಿಗೆ ಇವುಗಳ ಮುಖೇನ ಬಲವಾದ ಪ್ರತಿಕ್ರಿಯೆ ನೀಡುವುದು ಸಾಧ್ಯವಾಗಲಿಲ್ಲ.

ವಸಾಹತುಶಾಹಿಯ ಪ್ರಭಾವಕ್ಕೆ ಪ್ರಮುಖವಾಗಿ ಎರಡೂ ಮುಖಗಳೀವೆ ಒಂದು ಸುಧಾರಣಾವಾದಿ ಮುಖವಾದರೆ, ಮತ್ತೊಂದು ಆಡಳಿತದ ಕ್ರೂರಹಸ್ತ, ಭಾರತದ ದಾಸ್ಯ ಸಂಕೋಲೆ, ಮೊದಲ ಹಂತದಲ್ಲೇ ವಸಾಹತುಶಾಹಿ ಹಲವಾರು ಬಗೆಗಳಲ್ಲಿ ತನ್ನ ಕ್ರೂರ ಹಸ್ತವನನು ಭಾರತೀಯ ಬದುಕಿನ ಮೇಲೆ ಹರಡಿತು. ರಾಜಕೀಯ ಮತ್ತು ಆರ್ಥಿಕ ಮುಖದ ಕ್ರೌರ್ಯ ಭಾರತವನ್ನು ಬರಿದು ಮಾಡಿತ್ತು. ಮಿಶನರಿಗಳ ನೆರವು ಸುಧಾರಣೆಯ ರೂಪದಲ್ಲೇ ತನ್ನ ಪಟ್ಟ ಭದ್ರ ಹಿತಾಸಕ್ತಿಗಳನ್ನು ಬೆಳೆಸಿಕೊಳ್ಳುವ ತಂತ್ರಗಾರಿಕೆಯಾಗಿತ್ತು. ಇದು ಸುಧಾರಣಾವಾದಿ ರಾಜಕೀಯದ ಜೊತೆ ಸಾಮ್ರಾಜ್ಯಶಾಹಿಯ ಆಕ್ರಮಣಶೀಲತೆಯ ಗುಣವನ್ನು ಹೊಂದಿದೆ. ವಸಾಹತುಶಾಹಿ ದುಷ್ಟ ಶಕ್ತಿಯು ನಯವಾಗಿ ಭಾರತೀಯ ಸಮಾಜವನ್ನು ಶೋಷಿಸುತ್ತಿತ್ತು. ಇಲ್ಲಿನ ರಾಜರ ಹಾಗೂ ಪಟ್ಟ ಭದ್ರರ ಸ್ವಾರ್ಥಗುಣಗಳನ್ನು ತನ್ನ ಲಾಭಕ್ಕೆ ಬಳಸಿಕೊಂಡಿತು. ವಸಾಹತುಶಾಹಿ ಹತೆಗೆ ಬಂದ ಇಂಗ್ಲೀಷ್ ಶಿಕ್ಷಣ, ಸಾಹಿತ್ಯ, ಇವು ಅನಾವರಣಗೊಳಿಸಿದ ಐರೋಪ್ಯ ಸಾಂಸ್ಕೃತಿಕ ಎಚ್ಚರದ ಜಗತ್ತಿನ ಪರಿಚಯ, ಉದ್ಯೋಗಾವಕಾಶ, ಆಡಳಿತ ವ್ಯವಸ್ಥೆ, ಭಾರತೀಯನ ಬದುಕಿನಲ್ಲಿ ಆಧುನಿಕತೆ ಮೂಡಿಸಿತು. ಈ ಹಂತದಲ್ಲಿ ಆಧುನಿಕತೆ ಉಂಟು ಮಾಡಿದ ಪರಿಣಾಮ ಭಾರತೀಯ ಬದುಕಿಗೆ ಹೊಸದಾಗಿತ್ತು. ಜತೆಗೆ ಪರಂಪರೆಯಿಂದ ಬಂದ ಮೌಲ್ಯಗಳಿಗೆ ಆಘಾತಕಾರಿಯೂ ಆಗಿತ್ತು. ಇತಿಹಾಸದ ಉದ್ದಕ್ಕೂ ಪರಕೀಯ ಆಕ್ರಮಣಕ್ಕೆ ತುತ್ತಾಗುತ್ತಲೇ ಬಂದಿರುವ ಭಾರತೀಯ ಸಮಾಜ ಹಿಂದೆಂದೂ ಈ ಬಗೆಯ ಆಘಾತ ಎದುರಿಸಿರಲಿಲ್ಲ. ಈ ತನಕ ದಾಳಿ ನಡೆಸಿದ ಪರಕೀಯ ಸಂಸ್ಕೃತಿಗಳು ಒಂದು ಬಗೆಯ ಅಂತರವನನು ಉಳಿಸಿಕೊಂಡೇ ಬಂದಿದ್ದವು. ಅವುಗಳ ಪ್ರಭಾವಕ್ಕೆ ಒಳಗಾಗಿದ್ದರೂ ಅದು ಭಾರತೀಯ ಸಾಮಾಜಿಕ ವ್ಯವಸ್ಥೆಯನ್ನು ಅಲುಗಾಡಿಸುವಷ್ಟು ಪ್ರಬಲವಾಗಿರಲಿಲ್ಲ. ಆದರೆ ವಸಾಹತುಶಾಹಿ ವ್ಯವಸ್ಥೆಯಲ್ಲಿ ಸಾಮ್ರಾಜ್ಯಶಾಹಿ ಆಕ್ರಮಣಶೀಲತೆ ಇರುವುದರ ಜೊತೆಗೆ ತನ್ನದು ಹೆಚ್ಚೆಂದು ತೋರಿಸುವ ಹೆಚ್ಚುಗಾರಿಕೆ ಇತ್ತು. ಅಷ್ಟೇ ಅಲ್ಲದೇ ಇಲ್ಲಿಯ ಜನರಿಗೆ ದೇವರಂತೆ, ದೇವತೆಗಳಂತೆ ಕಂಡ ಮೌಲ್ಯಗಳು ವಸಾಹತುಶಾಹಿ ಕಣ್ಣುಗಳಿಗೆ ಅತಿ ಕೀಳಾದ ಮೌಢ್ಯಗಳಾಗಿಯೂ ರಾಕ್ಷಸ ಗುಣಗಳಂತೆ ಕಂಡವು. ಇದರಿಂದಾಗಿ ಭಾರತೀಯ ಸಮಾಜ ಮೊತ್ತಮೊದಲ ಬಾರಿಗೆ ವಾಸ್ತವಕ್ಕೆ ತೆರೆದುಕೊಂಡಿತು. ಹೊರಶತ್ರುವಿನ ವಿರುದ್ಧ ದೇಶದ ಎಲ್ಲಾ ಜನರನ್ನು ಒಗ್ಗಟ್ಟಾಗಿಸುವುದು ತಕ್ಷಣದ ಅನಿವಾರ್ಯವಾಗಿತ್ತು. ದೇಶೀಯ ಸಂಸ್ಕೃತಿ ಪರಕೀಯ ಸಂಸ್ಕೃತಿಯೊಂದರ ಮುಖಾಮುಖಿಯಲ್ಲಿ ತನ್ನೊಳಗೆ ಹೊಸತೊಂದು ಸುಧಾರಣವಾದಿ ಚಲನೆ ಪ್ರಾರಂಭಿಸಿತು. ಪರಕೀಯ ಆಳ್ವಿಕೆ ಮತ್ತು ಸಂಸ್ಕೃತಿಯ ವಿರುದ್ಧ ಸಮುದಾಯವಾಗಿ ಇಡೀ ದೇಶವನ್ನು ಐಕ್ಯಗೊಳಿಸಲು 'ರಾಷ್ಟ್ರೀಯತೆ' ತುರ್ತಿನ ಅನಿವಾರ್ಯವಾಗಿ ಮೂಡಿಬಂತು. ರಾಷ್ಟ್ರೀಯತೆಯ ಕಲ್ಪನೆಯ ಜತೆ ಸಾಂಸ್ಕೃತಿಕ ಪುನರ್ ಸ್ಥಾಪನೆ ಅಗತ್ಯವಾಗಿತ್ತು. ಇದಕ್ಕಾಗಿ ಸಾಂಪ್ರದಾಯಿಕ ಮೌಲ್ಯಗಳ ಕಡೆಗೆ ಮತ್ತು ಅದರ ಪುನರುತ್ಥಾನ ಪ್ರಕ್ರಿಯೆಯ ಕಡೆಗೆ ನೋಡುವುದು ಅನಿವಾರ್ಯವಾಗಿತ್ತು. ಒಳಗಿನ ಎಲ್ಲಾ ಶ್ರೇಣಿಕರಣ ವ್ಯವಸ್ಥೆ, ಪರಸ್ಪರ ವಿರೋಧಿ ನಿಲುವಗಳನ್ನು, ವರ್ಗಸಂಘರ್ಷಗಳನ್ನು, ಪ್ರಾದೇಶಿಕ, ಸಾಂಸ್ಕೃತಿಕ ಭಿನ್ನತೆಗಳನ್ನು ಮರೆತು 'ಆಧ್ಯಾತ್ಮಿಕ ಮೌಲ್ಯ, ಪರಂಪರೆಯ ಮೌಲ್ಯಗಳನ್ನೇ ಮೂಲಸ್ಥಾಯಿಯಾಗಿಸಿಕೊಂಡು ಹೋರಾಟಕ್ಕಿಳಿಯುವ ಅಥವಾ ಸ್ವರಕ್ಷಣೆಯ ತಂತ್ರಗಳಿಗೆ ಮಾರುಹೋಗಬೇಕಾಗಿತ್ತು.' ಏಕೆಂದರೆ ರಾಷ್ಟ್ರೀಯತೆ ನಮ್ಮ ಆಳಿವು ಉಳಿವಿನ ಪ್ರಶ್ನೆಯಾಗಿದ್ದಾಗ್ಯೂ ಸಾಂಸ್ಕೃತಿಕವಾಗಿ ಅಷ್ಟೇ ಪರಕೀಯವಾಗಿತ್ತು. ತತ್‌ಪರಿಣಾಮ ಸಾಂಸ್ಕೃತಿಕ ಪುನರ್‌ಸ್ಥಾಪನೆ ರಾಷ್ಟ್ರೀಯತೆಯಷ್ಟೇ ಪ್ರಮುಖವಾಗಿತ್ತು. ಪ್ರಾದೇಶಿಕ ಭಿನ್ನತೆಗಳೆಲ್ಲವನ್ನು ಮರೆತು 'ಧಾರ್ಮಿಕ, ಪಾರಂಪಾರಿಕ ಮೌಲ್ಯಗಳಿಗೆ ಪ್ರಾಮುಖ್ಯತೆ ನೀಡುವ ಮುಖೇನ ಏಕ ಸೂತ್ರವೊಂದರ ಸಿದ್ಧತೆ ನಡೆಯತೊಡಗಿತು. ಈ ನೆಲದ ಸಂಸ್ಕೃತಿಯ ಪ್ರತೀಕ ಮತ್ತು ಮೌಲ್ಯಗಳೆನಿಸಿದ ಧಾರ್ಮಿಕ ಮೌಲ್ಯಪ್ರತೀಕಗಳಾದ ಪುರಾಣ ಮೌಲ್ಯ, ಪಾರಂಪರಿಕ ಬದ್ಧತೆಗಳನ್ನು ತಬ್ಬಿಕೊಳ್ಳಬೇಕಾದದ್ದು ಅನಿವಾರ್ಯವಾಯ್ತು. ಈ ಮುಖೇನ ಭಾರತೀಯ ಸಮೂಹವನ್ನು ಒಂದು ಚೌಕಟ್ಟಿಗೆ, ಪರಂಪರೆಯ ಒಳಗೆ ತರುವ ಪ್ರಯತ್ನಗಳಾದವು. ಇಲ್ಲಿನ ಬಹುಮುಖ ಸಂಸ್ಕೃತಿಯಲ್ಲಿ ರಾಷ್ಟ್ರೀಯ ಕಲ್ಪನೆಯ ಮೌಲ್ಯಗಳನ್ನು ಕಂಡುಕೊಳ್ಳುವ ಸಾಧ್ಯತೆಗಳಿದ್ದುದು ಪುರಾಣಮೌಲ್ಯಗಳ ಮೂಲಕ. ಆದರೆ ಇದು ಕೂಡ ತಥಾಗತವಾಗಿ ಉಳಿದುಬಿಡಲಿಲ್ಲ. ಅನೇಕ ವಿಚಾರಗಳಲ್ಲಿ ತನ್ನೊಳಗಿನ ಹುಳಕನ್ನು ತಿದ್ದುವ, ಪರಿಸ್ಕರಿಸುವ ಮೂಲಕ ತನಗೆ ತಾನು ಮುಖಾಮುಖಿಯಾಗತೊಡಗಿತು. ಈ ಪರಿಣಾಮ ಹೊಸತೊಂದು ಆಧುನಿಕ ಮೌಲ್ಯಗಳು ಹುಟ್ಟಿಕೊಂಡಿತು. ಈ 'ಆಧುನಿಕತೆ' ಎಂಬುದು ಒಳಗಿನ ಶುದ್ಧೀಕರಣ ಮತುತ ಹೊಸ ಮೌಲ್ಯಗಳ ನಡುವಣ ಸ್ವಾಗತ-ಸಂಘರ್ಷವಾಯಿತು. ಹಲವು ಬಗೆಯ ಅಂತರ್ ವಿರೋಧಗಳುಳ್ಳ ಸಮಾಜವೊಂದು 'ಏಕದೇಹಿ'ಯಾಗಿ ವಸಾಹತುಶಾಹಿ ಪರಿಣಾಮಗಳನ್ನು ಎದುರಿಸಬೇಕಾಯ್ತು. ಈ ಹಂತದಲ್ಲಿ ವಸಾಹತುಶಾಹಿ ಆಧುನಿಕತೆಯನ್ನು ತನ್ನ ಮೌಲ್ಯಗಳ ಸಮರ್ಥನೆಗಾಗಿ ಬಳಸಿಕೊಳ್ಳತೊಡಗಿದ್ದನ್ನು ಕಾಣುತ್ತೇವೆ. ಇದಕ್ಕೆ ಪರ್ಯಾಯವಾಗಿ ವಸಾಹತುಶಾಹಿಯನ್ನು ವಿರೋಧಿಸುವ ಹೊಸ

ತಂತ್ರವೊಂದನ್ನು ರೂಪಿಸಿಕೊಂಡ ಭಾರತೀಯನ ಮನಸ್ಸು ರಾಷ್ಟ್ರೀಯವಾದ ಮತ್ತು ಪರಂಪರೆಯ ಮೌಲ್ಯದ ಪುನರ್ ಸ್ಥಾಪನೆ ಮತ್ತು ನವೀಕರಣದ ಮೂಲಕ ಪ್ರತಿಕ್ರಿಯೆ ನೀಡಲಾರಂಭಿಸಿತು. ಪರಕೀಯವಾದ ಎಲ್ಲಾ ಬಗೆಯ ದಾಸ್ಯವನ್ನು ತೊಡೆದು ಒಗೆಯಬೇಕೆಂಬ ಚಿಂತನೆಯೇ ರಾಷ್ಟ್ರೀಯವಾದದ ಒಳತುಡಿತವಾಯಿತು. ಬ್ರಿಟಿಷ್ ವಸಾಹತಿನೊಂದಿಗೆ ಬಂದ ಪಾಶ್ಚಾತ್ಯ ಸಂಸ್ಕೃತಿಯನ್ನು ನಮ್ಮ ಸಂಸ್ಕೃತಿಯ ಮೌಲ್ಯಗಳ ಮುಖೇನ ಧಿಕ್ಕರಿಸುವುದು ರಾಷ್ಟ್ರೀಯ ದ್ಯೋತಕವಾಯಿತು. ಈ ಕಾರಣಕ್ಕಾಗಿಯೇ ಅರವಿಂದ ಘೋಷ, ತಿಲಕ, ಗಾಂಧಿ ಮೊದಲಾದವರು ಭಾರತೀಯ ಪರಂಪರೆಯ ಧಾರ್ಮಿಕ, ಆಧ್ಯಾತ್ಮ ಮೌಲ್ಯಗಳ ಮುಖೇನ ಪರ್ಯಾಯ ಮಾರ್ಗವನ್ನು ಕಟ್ಟಿಕೊಂಡರು. ಸ್ವಾತಂತ್ರ್ಯ ಪೂರ್ವದಲ್ಲಿ ಉಂಟಾದ ವಿಚಾರಜಾಗೃತಿಯ ಮುಖವಿದ್ದುದೇ ಪರಂಪರೆ ಮತ್ತು ಧಾರ್ಮಿಕ ಮೌಲ್ಯಗಳ ಸ್ವರೂಪ ಕುರಿತದ್ದೇ ಆಗಿತ್ತು. ಮಾನಸಿಕ ದೃಢತೆಯನ್ನು ಪಡೆಯಲು ನಮ್ಮ ರಾಜಕೀಯ ನಾಯಕರುಗಳಿಂದ ತೊಡಗಿ ಡಿ.ವಿ.ಜಿ.ಯವರ ತನಕದ ಕವಿಗಳಿಗೆ ಬಲ ದೊರೆತದ್ದು ಪರಂಪರೆಯ ಮೌಲ್ಯಗಳಲ್ಲೇ. ವೈಜ್ಞಾನಿಕ ಸತ್ಯಗಳಿಗಿಂತಲೂ ಪಾರಮಾರ್ಥಿಕ ಸತ್ಯವನ್ನು ತರ್ಕಾತೀತವಾಗಿ ಜನಸಮೂಹ ಒಪ್ಪಿಕೊಂಡಿತು. ಈ ಕಾರಣದಿಂದಲೇ ಅಂದಿನ ಸಾಹಿತ್ಯ ನಮ್ಮ ಸಂಸ್ಕೃತಿ ಮತ್ತು ಅದರ ಮೌಲ್ಯಗಳ ಸಮರ್ಥನೆಗೆ ಹೊಸ ನೆಲೆಯ ಪ್ರತಿಪಾದನೆಯ ದಾರಿ ಹಿಡಿಯಿತು. ಹಳೆಯದನ್ನು ಹೊಸ ರೂಪದಲ್ಲಿಡುವ ಪ್ರಯತ್ನ ನಡೆಯಿತು. ಧಾರ್ಮಿಕ ಮೌಲ್ಯಗಳ ಪುನರುತ್ಥಾನವೂ ನಡೆಯತೊಡಗಿತು. ಈ ಹಂತದಲ್ಲಿ ಈ ರಾಷ್ಟ್ರೀಯತೆ ಮತ್ತು ಸಾಂಪ್ರದಾಯಿಕ ಮೌಲ್ಯಗಳ ಪುನರ್ ಸ್ಥಾಪನೆಯು ನೈಜ ಸಮಸ್ಯೆಗಳ ಆಳಕ್ಕೆ ಇಳಿಯದಂತೆ ಮಾಡಿದುದು ಸಮಕಾಲೀನ ದಾಸ್ಯ ಹೋರಾಟದ ಅನಿವಾರ್ಯತೆ ಆಗಿತ್ತೆಂಬುದು ಸ್ಪಷ್ಟ. ಇಲ್ಲಿ ತನ್ನೊಳಗಿನ ಚಿಕಿತ್ಸೆಗಿಂತ ಹೊರಗಿನದರ ವಿರುದ್ಧದ ಹೋರಾಟವೇ ಪ್ರಮುಖವಾಯಿತು. ಈ ನೆಲೆಯಲ್ಲಿ ಸದ್ಯದ ಅನಿವಾರ್ಯವಾಗಿ ಸ್ಥಳೀಯ ಸಾಂಸ್ಕೃತಿಕ ಮೌಲ್ಯಗಳಿಗಿಂತ (ರಾಷ್ಟ್ರೀಯತೆ ಹಿನ್ನೆಲೆಯಲ್ಲಿ) ಭಿನ್ನವಾಗಿ ವಿಶಾಲವಾದ ರಾಷ್ಟ್ರೀಯತೆಯ ರಾಜಕೀಯ ಮೌಲ್ಯಗಳನ್ನು ಹೊಂದಬೇಕಾದುದು ಸದ್ಯದ ತುರ್ತಾಗಿತ್ತು.

**ವಸಾಹತು ಕಾಲದಲ್ಲಿ ಹೊರಸಂಸ್ಕೃತಿ ಮತ್ತು ಒಳಸಂಸ್ಕೃತಿಗಳ ಮುಖಾಮುಖಿ**

ಹೊರ ಮತ್ತು ಪರಕೀಯ ಸಂಸ್ಕೃತಿ ವಿರುದ್ಧ ದೇಶದ ಎಲ್ಲಾ ಜನರನ್ನು ಒಗ್ಗಟ್ಟಾಗಿಸುವುದು ರಾಷ್ಟ್ರೀಯ ಹೋರಾಟದ ಗುರಿಯಾಗಿದ್ದು, ನಾಡಿನೊಳಗಣ ಜಾತಿ\ವರ್ಗ ಶ್ರೇಣಿಕರಣದ ಪರಸ್ಪರ ಹೋರಾಟ ರಾಷ್ಟ್ರೀಯ ಚಿಂತನೆಗೆ ವಿರೋಧಿಯಾಗಿದುದ್ದರಿಂದ ಮಹತ್ತ್ವ ಪಡೆದುಕೊಳ್ಳಲಿಲ್ಲ, ಮೊದಲ ಹಂತದಲ್ಲಿ 'ಹಳೆಯದನ್ನು (ಪರಿಷ್ಕರಿಸಿ) ಹೊಸರೂಪದಲ್ಲಿಡುವ ಕೆಲಸವಷ್ಟೇ ನಡೆಯಿತು. ಭಾರತದ ಮತ್ತು ಕರ್ನಾಟಕದ ಸಂಸ್ಕೃತಿ ರೂಪವನ್ನು ಧಾರ್ಮಿಕ, ಸಾಮಾಜಿಕ, ಜಾನಪದ, ಆಧ್ಯಾತ್ಮಿಕ ದೃಷ್ಟಿಗಳಿಂದ ನಿರೂಪಿಸಲಾಯಿತು. ಹಳೆಯದನ್ನು ಬಿಡದೆ ಹೊಸದಾಗಿ ಹೇಳುವ ಪ್ರಯತ್ನವಿತ್ತು.

ವಸಾಹತುಶಾಹಿ ಆಗಮನದಿಂದ ಉಂಟಾದ ಮತ್ತೊಂದು ಮಹತ್ತರ ಪರಿಣಾಮವೆಂದರೆ ಅವರು ನೀಡಿದ ಶಿಕ್ಷಣ ವ್ಯವಸ್ಥೆ ಮತ್ತು ಇಂಗ್ಲಿಷ್ ಶಿಕ್ಷಣ ಆ ಮುಖೇನ ಅನಾವರಣಗೊಂಡ ಇಂಗ್ಲೀಷ್ ಸಾಹಿತ್ಯ ಚಿಂತನೆ ಮತ್ತು ಯುರೋಪಿನ ಸಾಂಸ್ಕೃತಿಕ ಜಗತ್ತು, ಇಂಗ್ಲೀಷರ ವಸಾಹತುಶಾಹಿಯ ಬಿಸಿಯಲ್ಲೆ ತನ್ನೊಳಗಿನ ಅನಿಷ್ಟಗಳನ್ನು ಗುರುತಿಸುವುದು ಸಾಧ್ಯವಾಗುವಂತೆ ಮಾಡಿತು. ಪುರೋಹಿತಶಾಹಿ ವ್ಯವಸ್ಥೆಯಲ್ಲಿನ ಜಾತಿ ಪದ್ಧತಿಯ ಶೋಷಣೆಯ ಕ್ರೂರ ಸ್ವರೂಪ, ಜಮೀನ್ದಾರಿ ಪದ್ಧತಿಯೊಳಗಿನ ಅಸಹನೀಯ ಬದುಕು ತನ್ನಿಂದ ತಾನೇ ತೆರೆದು ತೋರಲಾರಂಭಿಸಿತು. ವಸಾಹತುಶಾಹಿ ಪ್ರಗತಿಪರತೆ ಮತ್ತು ಪರಿಷ್ಕಾರಕ ಚಿಂತನೆಗಳನ್ನು ಒಳಗಿಂಗೊಳಗೆ ಮೂಡಿಸತೊಡಗಿದ್ದು ಸತ್ಯ, ಜನಸಮೂಹದ 'ಒಳ ಬದುಕನ್ನು' ಸೂಕ್ಷ್ಮವಾಗಿ ನೋಡುವ ಮನೋಧರ್ಮವನ್ನು ವಸಾಹತುಶಾಹಿ ಹುಟ್ಟುಹಾಕಿತು. ಕೆಳಜಾತಿ, ವರ್ಗದ ಬದುಕು ವಸಾಹತುಶಾಹಿಯ ಪರೋಕ್ಷ ಪರಿಣಾಮಕ್ಕೆ ಒಳಗಾಗಿ ಅನಾವರಣಗೊಳ್ಳತೊಡಗಿತು. ಆಧ್ಯಾತ್ಮಿಕ ಸತ್ವ, ಮೌಲ್ಯಗಳನ್ನು ಪುರೋಹಿತಶಾಹಿ ಮತೀಯ ಮೌಢ್ಯಗಳೊಳಗೆ ಸೇರಿಸಿ ಹಾಳುಗೆಡವಿದೆ. ಆದ್ದರಿಂದ ಧಾರ್ಮಿಕ, ಆಧ್ಯಾತ್ಮಿಕ ಮೌಲ್ಯಗಳನ್ನು ಪಾರಂಪರಾಗತ ಶಕ್ತಿಗಳಿಂದ ಮುಕ್ತಗೊಳಿಸುವ ಕಾರ್ಯವೂ ನಡೆಯಿತು. ಈ ರೀತಿಯ ಪ್ರಕ್ರಿಯೆಯನ್ನೇ 'ವಸಾಹತುಶಾಹಿ ಆಗಮನದ ಸಂಘರ್ಷ ಮತ್ತು ಸ್ವಾಗತ' ವೆಂದು ಗುರುತಿಸುವುದು, ಬ್ರಿಟಿಷ್ ಶಿಕ್ಷಣ ಮತ್ತು ಇಂಗ್ಲೀಷ್ ಶಿಕ್ಷಣದ ಮುಖೇನ ಹೊಸಬಗೆಯ ಸಾಂಸ್ಕೃತಿಕ – ಸಾಹಿತ್ಯಿಕ ಬದುಕು ರೂಪುಗೊಳ್ಳತೊಡಗಿತು. ಈ ಹಿನ್ನೆಲೆಗಳಲ್ಲಿಯೇ ಕನ್ನಡ ಸಾಹಿತ್ಯದ ರೂಪುರೇಷೆಗಳನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ನವೋದಯ ಸಾಹಿತ್ಯವೆಂಬುದು ಆಧುನಿಕ ಚಿಂತನೆಯೆಂದು ಕರೆಯಲಾಗುವ ಈ ಪರಿಸ್ಥಿತಿಯ ಹುಟ್ಟಾಗಿದೆ. ವಸಾಹತುಶಾಹಿ ಅನುಭವ ಭಾರತೀಯ ಬದುಕಿನ ಹಲವು ರಂಗಗಳಲ್ಲಿ ಉಂಟುಮಾಡಿದ ಪ್ರಭಾವದ ಪ್ರತಿಕ್ರಿಯೆಯಾಗಿ ಹುಟ್ಟಿದ ಆಲೋಚನ ಕ್ರಮವನ್ನು ಈ ನವೋದಯ ಸಾಹಿತ್ಯದಲ್ಲಿ ಕಾಣುತ್ತೇವೆ. ಕನ್ನಡ ನವೋದಯದಲ್ಲಿ ಹೀಗೆ ಸಂಸ್ಕೃತಿಯ ಕಡೆಗೆ ಮರಳುವ ಪ್ರಕ್ರಿಯೆಯಿದೆ. ನಮ್ಮ ನಾಡು ನುಡಿಯ ಬಗ್ಗೆ, ಸಂಸ್ಕೃತಿಯ ಬಗ್ಗೆ ಉಂಟಾದ ಜಾಗೃತಿ ಪರೋಕ್ಷವಾಗಿ ರಾಷ್ಟ್ರೀಯವಾದದ ಮೂಲವಾಗಿತ್ತು. ನಮ್ಮ ಸಂಸ್ಕೃತಿಯು ಘನತೆಯಿಂದ ಬಾಳಿದ, ಶ್ರೇಷ್ಠತೆಯನ್ನು ಮೆರೆದ ಪುರಾಣ ಮೌಲ್ಯಗಳ ಕಡೆಗೆ ಚಲಿಸುವುದು ಅನಿವಾರ್ಯವಾಗಿತ್ತು. ಅಷ್ಟೇ ಅಲ್ಲದೆ ವಾಸ್ತವ ಬದುಕಿನ ಹುಳುಕುಗಳನ್ನು ಇಲ್ಲವಾಗಿಸಲು ಪುರಾಣದ ಮೌಲ್ಯಗಳ ಕಡೆಗೆ ಸಾಗಬೇಕಿತ್ತು. ಏಕೆಂದರೆ ವಸಾಹತುಶಾಹಿ ಪಾಶ್ಚಾತ್ಯ ಸಂಸ್ಕೃತಿಯ ವಿರುದ್ಧವಾಗಿ ನಮ್ಮ ಸಂಸ್ಕೃತಿಯ ಅಂತಃಶ್ಚೇತನ, ಮೌಲ್ಯಗಳನ್ನು ಪುನರ್ ನಿರ್ಮಿಸಿ ಅದನ್ನು ಹೋರಾಟದ ಮೌಲ್ಯಗಳನ್ನಾಗಿ ಮಾಡಿಕೊಳ್ಳುವ ಅಗತ್ಯವಿತ್ತು. ಬ್ರಿಟಿಷರ ವಸಾಹತುಶಾಹಿ ಉಂಟುಮಾಡಿದ, 'ಭಾರತೀಯ ಸಂಸ್ಕೃತಿ, ಧೋರಣೆಗಳು ಅವೈಚಾರಿಕವೆಂದೂ ಭಾರತೀಯರಿಗೆ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಆರ್ಥಿಕ ಪ್ರಗತಿ ಸಾಧನೆಗೆ ವಸಾಹತುಶಾಹಿಯೇ ಆಧುನಿಕ ರೂಪವೆಂಬುದನ್ನು ಅಂತರ್ಗತವಾಗಿ ಸಾಧಿಸತೊಡಗಿತ್ತು. "ಸಾಂಪ್ರದಾಯಕವಾಗಿ ನಮ್ಮ ಚಿಂತನೆಯಲ್ಲಿದ್ದ ಮಾನವ ಪರ ಆಶಯಗಳು ಇಲ್ಲಿನ ನೆಲದ ಮೇಲಿನ ಮನುಷ್ಯರ ಬದುಕಿನ ವಾಸ್ತವಗಳ ಜತೆ ಕಸಿಕೊಂಡು ಗಟ್ಟಿಯಾದದ್ದು ಮೂರ್ತವಾದದ್ದು. ಈ ಹೊಸ ಬಗಯ ಚಿಂತನೆಗಳನ್ನು ಸಂಪ್ರದಾಯದ ಮೂಲಸತ್ವಗಳಿಗೆ ಕಸಿಮಾಡುತ್ತಾ ಬರೆದರು. ಆದರೆ ಸಾಂಸ್ಕೃತಿಕ ಸಾಧ್ಯತೆಗಳನ್ನು ಉಳಿಸಿಕೊಳ್ಳಬೇಕಾದರೆ ಇಂದಿನ ವಾಸ್ತವಗಳನ್ನು ನಿರಂತರವಾದ ಪುರಾಣ ಕತೆಗಳ ಹಿನ್ನೆಲೆಯಲ್ಲಿ ನೋಡುವುದು ಅವಶ್ಯಕವಾಗಿತ್ತು."[೧] ತಮ್ಮ ಸಂಸ್ಕೃತಿ ಕೂಡ ಘನತೆಯಿಂದ ಬಾಳಿದ, ಸಂಭ್ರಮದಿಂದ ಮೆರೆದ ಘಟ್ಟವೊಂದಿತ್ತು ಎಂದು ತನ್ನ ಸಂಸ್ಕೃತಿಯ ಮೌಲ್ಯಗಳನ್ನು ಮುಖಾಮುಖಿಯಾಗಿಸುವ ಕೆಲಸ ಅನಿವಾರ್ಯವಾಗಿತ್ತು. ವಸಾಹತುಶಾಹಿ ಅನುಭವವು ಐತಿಹಾಸಿಕ, ಧಾರ್ಮಿಕ ಗತವೈಭವಗಳ ನೆನಪನ್ನು ವೈಭವೀಕರಿಸತೊಡಗಿತು. ಈ ಅನುಭವದಿಂದ ಸಮಾಜದಲ್ಲಿ ಆಗುತ್ತಿರುವ ಬದಲಾವಣೆ ದೇಸಿಯ ಪರಂಪರೆಯಲ್ಲಿ ಸತ್ವ ಹುಡುಕುವುದು ಮತ್ತು ಆ ಮುಖೇನ

ಸಂಘರ್ಷ ತೋರಲು ಪ್ರಯತ್ನಿಸಿದರು. ಇಂತಹ ಸಂದರ್ಭದಲ್ಲಿ ನಮ್ಮವರು ನೆಲೆಯನ್ನು ಕಂಡುಕೊಂಡಿದ್ದು ಧಾರ್ಮಿಕ ಚೌಕಟ್ಟಿನಲ್ಲಿ. ಪುರಾಣ ಪಾತ್ರ ಮತ್ತು ಮೌಲ್ಯಗಳ ವೈಭವೀಕರಣವು ಸಾಹಿತ್ಯ ರೂಪಗಳಲ್ಲಿ ಪ್ರತಿಕ್ರಿಯೆಯಾಗಿ ಮರುಹುಟ್ಟು ಪಡೆಯಲಾರಂಭಿಸಿತು. ನಮ್ಮ ಕವಿಗಳು ಪುರಾಣ ಹಾಗೂ ಈ ನೆಲದ ಸಾಂಸ್ಕೃತಿಕ ವೀರರ ಚಿತ್ರಗಳನ್ನು ಕಟ್ಟುವುದರ ಮೂಲಕ ಪರಕೀಯವಾದ ವಸಾಹತುಶಾಹಿ ಜತೆಗೆ ಮುಖಾಮುಖಿಯಾದರು. ಇಲ್ಲಿನ ಬದುಕಿಗೆ ಗಟ್ಟಿತನ, ಶ್ರದ್ಧೆ ಇದ್ದದ್ದು ಧಾರ್ಮಿಕ ಸಂಸ್ಕೃತಿಯಲ್ಲಿ, ಧಾರ್ಮಿಕ ನಾಯಕರೆಲ್ಲಾ ಪುರಾಣ ನಾಯಕತೆ, ಧರ್ಮ–ಪುರಾಣಗಳೇ ಈ ಸಂಸ್ಕೃತಿಯ ಒಳ ಚೈತನ್ಯವಾಗಿತ್ತು. ಅದನ್ನೇ ಸಾಹಿತಿಗಳು ರೂಢಿಸಿಕೊಂಡಿದ್ದು ಅನಿವಾರ್ಯವಾಗಿತ್ತು. ಇಂಗ್ಲೀಷ್, ಭಾಷೆ–ಶಿಕ್ಷಣ ಮತ್ತು ಸಾಹಿತ್ಯ ಮುಖೇನ ರಾಷ್ಟ್ರಮಟ್ಟದುದ್ದಕ್ಕೂ ವ್ಯಾಪಿಸಿಕೊಳ್ಳುತ್ತಿದ್ದ ವಸಾಹತುಶಾಹಿ ಶಕ್ತಿಗೆ ಎದುರಾಗಿ ಕನ್ನಡ ಸಾಹಿತ್ಯ ತನ್ನ ಪರಂಪರೆ ಮತ್ತು ಸಾಂಸ್ಕೃತಿಕ ಅನುಭವಗಳ ಖಣಿಯಾಗಿದ್ದ ಪ್ರಾಚೀನ ಮಾರ್ಗ ಮತ್ತು ದೇಸಿಗಳೆರಡನ್ನು ಒಟ್ಟಿಗೆ ಎತ್ತಿಹಿಡಿದು ನಡೆಯಬೇಕಾದದು ಸದ್ಯದ ಅನಿವಾರ್ಯವಾಗಿತ್ತು. "ಕನ್ನಡ ನವೋದಯದಲ್ಲಿ ಹೀಗೆ ಸಂಸ್ಕೃತಿ ಕಡೆಗೆ ಮರಳುವ ಪ್ರಕ್ರಿಯೆಯಿದೆ ಮನುಷ್ಯನ ವೈಯಕ್ತಿಕ ನಂಬಿಕೆಗಳು. ಹಳೆಯ ಗವರ್ನ್ಮೆಂಗ್ ಮಾದರಿಗಳ ಹುಡುಕಾಟ, ಗ್ರಾಮ ಸಮಾಜದ ಬದಲಾವಣೆಯ ಪರಿಕಲ್ಪನೆಯ ಮನುಷ್ಯನ ಹೃದಯದಲ್ಲಿ ಸ್ಥಾಪಿತವಾಗುವ ಒಂದು ಭಾವನಾತ್ಮಕ ಪ್ರಕ್ರಿಯೆಯಾಗಿರುವುರಿಂದ ನವೋದಯವು ಅದನ್ನು ಹಿಡಿಯುವ ಪ್ರಯತ್ನ ಮಾಡಿದೆ. ರಾಷ್ಟ್ರೀಯ ಪರವಾದ ನಿಲುವುಗಳು ಪು.ತಿ. ನರಂತವರಿಗೆ ಹಳೆಯ ಪುರಾಣಗಳನ್ನು ಭಿನ್ನವಾಗಿ ಗ್ರಹಿಸುವಂತೆ ಮಾಡಿದೆ. ಬ್ರಿಟಿಷ್ ರಾಜಸತ್ತೆಯ ವಿರುದ್ಧ ಬಂದಿರುವ ನಿಲುವು ಇದು. ಇದು ಪು.ತಿ.ನ ಅವರಿಗೆ ಕೃಷ್ಣನೇ ದೊಡ್ಡ ಶಕ್ತಿಯಾಗಿ ಕಾಣುತ್ತನೆ."[೨] ಈ ಸಾಹಿತ್ಯ ಸೃಷ್ಟಿಕ್ರಿಯೆ ಕೂಡ ಸಾಂಸ್ಕೃತಿಕ ಪ್ರತಿಭಟನೆಯ ಪ್ರಕ್ರಿಯೆ ಆಗಿಯೇ ಅಭಿವ್ಯಕ್ತಿಯಾಗಿದೆ. ಸಾಹಿತ್ಯದಲ್ಲಿ ಈ ಪ್ರಕ್ರಿಯೆ ಸ್ವಸಂಸ್ಕೃತಿ ಮೌಲ್ಯ ಶೋಧನೆ ಮತ್ತು ವೈಭವೀಕರಣ ಕ್ರಿಯೆಗಳಿಗೆ ಹೊರಳುತ್ತದೆ. ಇಂಗ್ಲೀಷ್ ಸಾಹಿತ್ಯ ಪ್ರಭಾವದಿಂದ ಬರೆದ ಸಾಹಿತ್ಯದ ರೂಪ ಹೊಸದಾಗಿ ಕಾಣಿಸಿದರೂ ವಸಾಹತುಶಾಹಿ ಇಲ್ಲಿನ ಸಂಸ್ಕೃತಿಯನ್ನು ಏಕಾಂಕಿಯಾಗಿ ಬೆತ್ತಲೆ ಮಾಡತೊಡಗಿದಾಗ ಇಲ್ಲಿನ ಸಂಸ್ಕೃತಿ ತನ್ನ ಮೌಲ್ಯಗಳಿಗಾಗಿ ಅಂತಃಸತ್ವಕ್ಕಾಗಿ ತಡಕಾಡಿದ್ದು ಪುರಾಣ ಮೌಲ್ಯಗಳ ಪುನರುತ್ಥಾನಕ್ಕೆ ದಾರಿ ಮಾಡಿಕೊಟ್ಟಿತು. ಜತೆಯಲ್ಲಿ ಆದರ್ಶವಾದ, ಮಾನವತಾವಾದ, ಗಾಂಧಿವಾದ ಹುಟ್ಟಿಕೊಂಡಿತು. ಕ್ರಮೇಣ ಈ ಪ್ರವೃತ್ತಿ ವಸಾಹತುಶಾಹಿ ವಿರೋಧದಿಂದಾಗಿ ವಾಸ್ತವವನ್ನು ಆದರ್ಶೀಕರಿಸುವ ಕ್ರಿಯೆಗೆ ಮೂಲವಾಯಿತು.

"ಇನ್ನೊಂದು ಕಡೆ ಅತ್ಯಂತ ಮಾರಕವಾದ ಪರಿಣಾಮವೆಂದರೆ ಗತಕಾಲದ ಮರುಹಂಬಲದ ಧೋರಣೆ ಈ ಧೋರಣೆಯಿಂದಾಗಿ ಗತಕಾಲದಲ್ಲಿ ದೇಶೀಯ ಸಂಸ್ಕೃತಿ ಅತ್ಯಂತ ಆರೋಗ್ಯಕರವಾಗಿತ್ತೆನ್ನುವ ಭ್ರಮೆ ಹುಟ್ಟಿಕೊಳ್ಳುತ್ತದೆ. ವಾಸ್ತವದಿಂದ ವಿಮುಖವಾಗುವ ಈ ಧೋರಣೆ ಒಂದು ಸಂಸ್ಕೃತಿಯ ಮನಸ್ಸನ್ನು ಸಂಪೂರ್ಣ ಹದಗೆಡಿಸಬಲ್ಲುದು"[೩] ಇರುವ ವಸ್ತುಸ್ಥಿತಿಗಿಂದ ಭಿನ್ನವಾಗಿ ಆದರ್ಶೀಕೃತ ಕಲ್ಪನೆ–ಚಿತ್ರಣಗಳೇ ಸತ್ಯವೆಂಬ ಹುಸಿ ಭ್ರಮೆಯನ್ನು ಹುಟ್ಟಿಸಿಬಿಡುತ್ತದೆ. ತನ್ನ ನಿಜ ಸತ್ವವನ್ನು ಕಳೆದುಕೊಂಡಿದ್ದ ಭಾರತೀಯ ಸಂಸ್ಕೃತಿಯು ಪರಕೀಯ ಸಂಸ್ಕೃತಿಯು ಪರಕೀಯ ಸಂಸ್ಕೃತಿ ದಾಳಿಯಿಂದ ಮರುಚೇತನ ಪಡೆದುಕೊಳ್ಳಲು ಸಾಧ್ಯವಾಯಿತು. ಸಾಂಸ್ಕೃತಿಕ ಪುನರುಜ್ಜೀವನ ಮುಖ್ಯ ಧಾರೆಯಾಯಿತು. ಜತೆಗೆ ಇಲ್ಲಿನ ಅನೇಕ ಪ್ರಾದೇಶಿಕ ಸಂಸ್ಕೃತಿಗಳು ನಮ್ಮ ನೆಲೆಯನ್ನು ಗಟ್ಟಿಯಾಗಿಸುವ ಪ್ರಯತ್ನಗಳಲ್ಲಿ ನಡೆಯಿತು. ಕನ್ನಡ ಮಟ್ಟಿಗೆ ಕನ್ನಡ ನಾಡೂ ನುಡಿ ಕುರಿತಾದ ಅಭಿಮಾನ ಈ ಪರ ನಿಲುವುಗಳಲ್ಲಿ ಇದನ್ನು ಕಾಣುತ್ತೇವೆ. ವಸಾಹತುಶಾಹಿ ಪರಿಣಾಮ ರಾಷ್ಟ್ರೀಯತೆ ನೆಲದ ಬಹುಮುಖಿ ಸಂಸ್ಕೃತಿಯ ಅಪಾಯವಾಗಿ ಕಂಡು ಬಂದಾಗ ಪ್ರಾದೇಶಿಕ ಸಂಸ್ಕೃತಿಯ ವಿಶಿಷ್ಟತೆಯನ್ನು ಸಮರ್ಥಿಸಿಕೊಳ್ಳುವುದು ಅಂತರಾಳದ ಅಗತ್ಯ ಹಾಗೂ ಅನಿವಾರ್ಯವಾಗಿ ಮೂಡಿಯೂ ಬಂತು. ದೇಶಿವಾದಕ್ಕೆ ವಸಾಹತುಶಾಹಿಯ ರಾಷ್ಟ್ರೀಯತೆಗಿಂತ ಪ್ರಾದೇಶಿಕತೆ ಮುಖ್ಯವಾಗಿತ್ತು. ಈ ದೇಶೀವಾದವು ಹೊರಗಣ ಸಂಸ್ಕೃತಿಗೆ ಪ್ರತಿಸ್ಪರ್ದಿಯಾಗಿ ಸ್ಥಳೀಯ ಸಂಸ್ಕೃತಿಯ ಮೌಲ್ಯ ವಿಶೇಷಗಳನ್ನು ಎತ್ತಿ ಹಿಡಿಯಲು ಪ್ರಯತ್ನಿಸಿದೆ. ತನ್ನದೇ ಆದ ಅನನ್ಯ ಸತ್ವ ಶೀಲತೆಯನ್ನು, ಸೃಷ್ಟಿ ಶೀಲತೆಯನ್ನು ಎಚ್ಚರಿಸುವ ಜೊತೆಗೆ ರಕ್ಷಿಸುವ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತದೆ. ಈ ಸಂಸ್ಕೃತಿಯ ಬದುಕಿನ ಸತ್ವಶೀಲತೆಯನ್ನು ನಾಶಪಡಿಸುವ ಆಂತರಿಕ ಬಾಹ್ಯ ಚಿಂತನೆಗಳನ್ನು ನಿರಾಕರಿಸುವ, ವಿರೋಧಿಸುವ ಮುಖೇನ ದೇಶಿವಾದ ತನ್ನ ಪ್ರತಿಭಟನೆ ತೋರುತ್ತದೆ.

## ಅಡಿ ಟಿಪ್ಪಣಿಗಳು

1. ಶಿವರುದ್ರಪ್ಪ ಜಿ.ಎಸ್. (ಸಂ) ೧೯೮೮, ಪುಟ.೩೦.
2. ಕೇಶವ ಶರ್ಮ. ಕೆ. ವಸಾಹತುಶಾಹಿ ಅನುಭವ, ೧೯೯೮, ಪುಟ.೩೦.
3. ರಾಜೇಂದ್ರ ಚೆನ್ನಿ, ೧೯೯೯, ದೇಸೀವಾದ, ಪುಟ. ೩೦.